ಕೇಳುತ್ತಿದೆ, ಯಾವುದು ಜನತಾ ದಳ ಪಕ್ಷ? ಇತ್ತ ಕಡೆ ಹೆಣ. ನಾವು ಎಲ್ಲಿಗೆ ಹೋಗಬೇಕು? ಎಲ್ಲಿಗೆ ಹೋಗುತ್ತಿದ್ದೇವೆ? ಗೊತ್ತಿಲ್ಲವೆಂದು ಕೇಳುತ್ತಿದ್ದಾರೆ. ಇವ್ಹೊತ್ತು ಅಲ್ಲಿರುವವರು ಕೇಳುತ್ತಿದ್ದಾರೆ: ನಾವು ಎಲ್ಲಿಗೆ ಹೋಗಬೇಕು? ಮಾರ್ಗ ದರ್ಶನ ನೀಡಿ. ಅದೇ ಈಗಿರುವ ರಾಜಕೀಯ ಪರಿಸ್ಥಿತಿ. ಅದನ್ನೇ ಕಿವಿ ಇದ್ದರೆ ಕೇಳಿ, ಕಣ್ಣಿದ್ದರೆ ನೋಡಿ, ಪಂಚೇಂದ್ರಿಯಗಳಿದ್ದರೆ, ಅರ್ಥಮಾಡಿಕೊಳ್ಳಿರೆಂದು ಈ ಸಂದರ್ಭದಲ್ಲಿ ಹೇಳುತ್ತಾ ತಮಗೆ ಅಭಿನಂದನೆಗಳನ್ನು ಸಲ್ಲಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

(9) <u>ಪ್ರಕಟಣೆ</u>

ಉಪಾಧ್ಯಕ್ಷರು :- ಈಗ ಒಂದು ಪ್ರಕಟಣೆ ಇದೆ. ಏನೆಂದರೆ, ಶ್ರೀಮತಿ ಲೀಲಾದೇವಿ . ಆರ್. ಪ್ರಸಾದ್, ಮಾನ್ಯ ಪ್ರವಾಸೋದ್ಯಮ, ಕನ್ನಡ ಮತ್ತು ಸಂಸ್ಕೃತಿ ರಾಜ್ಯ ಸಚಿವರು, ಇವರಿಂದ ಪತ್ರ ಬಂದಿದ್ದು, ದಿನಾಂಕ 25. 3. 1998 ರಂದು ಬೆಳಿಗ್ಗೆ 8. 30 ಗಂಟೆಗೆ ಪ್ರವಾಸೋದ್ಯಮ ಇಲಾಖಾ ವತಿಯಿಂದ ಕರ್ನಾಟಕ ಪ್ರವಾಸೋದ್ಯಮ ಅಭಿವೃದ್ಧಿ ನಿಗಮವು ಸನ್ಮಾನ್ಯ ಶಾಸಕರುಗಳಿಗೆ ಪ್ರವಾಸದ ಬಗ್ಗೆ ಪರಿಚಯ ಪ್ರವಾಸವನ್ನು ಏರ್ಪಡಿಸಲಾಗಿದೆ ಹಾಗೂ ಲಘು ಉಪಹಾರ ಏರ್ಪಡಿಸಲಾಗಿದೆ. ಪ್ರವಾಸೋದ್ಯಮ ಅಭಿವೃದ್ಧಿ ನಿಗಮದ ಬಸ್ಸುಗಳ ಶಾಸಕರ ಭವನದಿಂದ ಬೆಳಿಗ್ಗೆ 8. 30 ಗಂಟೆಗೆ ಹೊರಟು ರಮಣಶ್ರೀ ಕ್ಯಾಲಿಫೋರ್ನಿಯ ವಿಹಾರ ಧಾಮದಲ್ಲಿ ಲಘು ಉಪಹಾರ ಸೇವಿಸಿದ ನಂತರ ವಿಧಾನಸೌಧದ ಬಳಿ ಬೆಳಗ್ಗೆ 11.00 ಗಂಟೆಗೆ ಪ್ರವಾಸ ಮುಕ್ತಾಯಗೊಳ್ಳಲಿದೆ. ಈ ಬಗ್ಗೆ ಈಗಾಗಲೇ ಸದನದ ಅಜೆಂಡಾ ಕಳುಹಿಸುವಾಗ ಆಮಂತ್ರಣ ಪತ್ರಿಕೆಯನ್ನು ಜೊತೆಯಲ್ಲಿ ಕಳುಹಿಸಲಾಗಿದೆ. ಆದುದರಿಂದ, ಎಲ್ಲಾ ಮಾನ್ಯ ಸದಸ್ಯರು ಈ ಪರಿಚಯ ಪ್ರವಾಸದಲ್ಲಿ ಪಾಲ್ಗೊಂಡು ಬೆಳಿಗ್ಗೆ ಉಪಹಾರ ಸ್ವೀಕರಿಸಬೇಕೆಂದು ಕೋರಿರುತ್ತಾರೆ.

ಈಗ ಸದನವನ್ನು ಮುಂದೂಡಿ ನಾಳೆ ಬೆಳಿಗ್ಗೆ ಪುನ: 11.00 ಗಂಟೆಗೆ ಸೇರುವುದು.

(ಸದನವು ಸಂಜೆ 5 ಗಂಟೆಗೆ 55 ನಿಮಿಷಕ್ಕೆ ಮುಕ್ತಾಯಗೊಂಡು ಪುನ: ದಿನಾಂಕ 25 ನೆ ಮಾರ್ಚ್ ಮಾಹೆ 1998ರ ಬುಧವಾರದಂದು ಬೆಳಿಗ್ಗೆ 11.00 ಗಂಟೆಗೆ ಸೇರಲು ನಿಶ್ಚಯಿಸಿತು)

★ ಈ ಚಿಹ್ನೆ ಮಾನ್ಯ ಸದಸ್ಯರ ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸಿರುತ್ತದೆ.

ಮುದ್ರಕರು: ನಿರ್ದೇಶಕರು, ಮುದ್ರಣ, ಲೇಖನ ಸಾಮಗ್ರಿ ಮತ್ತು ಪ್ರಕಟಣೆಗಳು, ಸಶಾಮು. ತುಮಕೂರು, ಕಾಸೂ. 47 - 350 ಪುಸ್ತಕಗಳು ದಿನಾಂಕ:07-11-2001